**National**
**Kannada**
**19.11.2024 / 19.35 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಮಹಾರಾಷ್ಟ್ರದ ಎಲ್ಲಾ ೨೮೮, ಜಾರ್ಖಂಡ್‌ನ ಎರಡನೇ ಹಂತದ ೩೮ ವಿಧಾನಸಭಾ ಕ್ಷೇತ್ರಗಳಿಗೆ ನಾಳೆ ಮತದಾನ

೨. ದೇಶಾದ್ಯಂತ ಎಲೆಕ್ಟ್ರಿಕ್ ವಾಹನಗಳ ಬಳಕೆ ಕುರಿತಂತೆ ಸರ್ಕಾರದಿಂದ ಜಾಗೃತಿ; - ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ

೩. ನಾಳೆಯಿಂದ ಇದೇ ೨೮ ರವರೆಗೆ ಗೋವಾದಲ್ಲಿ ೫೫ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ

೪. ಮಹಿಳೆಯರ ಏಷ್ಯನ್ ಹಾಕಿ ಚಾಂಪಿಯನ್ಸ್ ಟ್ರೋಫಿ; ಜಪಾನ್ ಮಣಿಸಿ ಫೈನಲ್ ಪ್ರವೇಶಿಸಿದ ಭಾರತ

**<><*<><>*><>**

ಮಹಾರಾಷ್ಟ್ರದ ಎಲ್ಲಾ ೨೮೮ ವಿಧಾನಸಭಾ ಕ್ಷೇತ್ರಗಳಿಗೆ ನಾಳೆ ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಬೆಳಗ್ಗೆ ೭ ಗಂಟೆಯಿಂದ ಸಂಜೆ ೫ ಗಂಟೆಯವರೆಗೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ೨೮೮ ವಿಧಾನಸಭಾ ಕ್ಷೇತ್ರಗಳಲ್ಲಿ ೪ ಸಾವಿರದ ೧೩೬ ಅಭ್ಯರ್ಥಿಗಳು ಕಣದಲಿದ್ದು, ಈ ಪೈಕಿ ೩ ಸಾವಿರದ ೭೭೧ ಪುರುಷ ಅಭ್ಯರ್ಥಿಗಳು ಮತ್ತು ೩೬೩ ಮಹಿಳಾ ಅಭ್ಯರ್ಥಿಗಳಿದ್ದಾರೆ. ಇದೇ ೨೩ ರಂದು ಮತ ಎಣಿಕೆ ಕಾರ್ಯ ನಡೆಯಲಿದೆ. ವಿಧಾನಸಭಾ ಚುನಾವಣೆಯ ಜೊತೆಗೆ ನಾಂದೇಡ್ ಲೋಕಸಭಾ ಕ್ಷೇತ್ರಕ್ಕೂ ನಾಳೆ ಉಪಚುನಾವಣೆ ಜರುಗಲಿದೆ. ಇತ್ತೀಚಿಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರ ಶೇಕಡ ೬೧.೩೩ ರಷ್ಟು ಕಡಿಮೆ ಮತದಾನ ಕಂಡಿತ್ತು. ಚುನಾವಣಾ ಆಯೋಗದ ಪ್ರಕಾರ ನಗರ ಮತ್ತು ಯುವಜನ ನಿರಾಸಕ್ತಿ ಸಮಸ್ಯೆಯು ಚುನಾವಣಾ ಸಮಿತಿಗೆ ಪ್ರಮುಖ ಕಾಳಜಿಯ ವಿಷಯವಾಗಿದೆ. ೨೦೧೯ರ ಲೋಕಸಭಾ ಚುನಾವಣೆಯಲ್ಲಿ ಮುಂಬೈನಲ್ಲಿ ಶೇಕಡ ೫೫.೪ ರಷ್ಟು ಮತದಾನವಾಗಿದ್ದು, ೨೦೨೪ ರಲ್ಲಿ ಶೇಕಡ ೫೨.೪ ಕ್ಕೆ ಕುಸಿದಿದೆ. ಆಕಾಶವಾಣಿಯೊಂದಿಗೆ ಮಾತನಾಡಿದ ಮಹಾರಾಷ್ಟ್ರ ಮುಖ್ಯ ಚುನಾವಣಾಧಿಕಾರಿ ಎಸ್.ಚೊಕ್ಕಲಿಂಗಂ, ರಾಜ್ಯದಲ್ಲಿ ಮತದಾನ ಪ್ರಮಾಣವನ್ನು ಹೆಚ್ಚಿಸಲು ಆಯೋಗವು ಮುಂಬೈ ಮತ್ತು ಇತರೆಡೆಗಳಲ್ಲಿ ಸಂಘಟಿತ ಪ್ರಯತ್ನ ನಡೆಸುತ್ತಿದೆ ಎಂದರು.

**<><*<><>*><>**

ಜಾರ್ಖಂಡ್‌ನಲ್ಲಿ ನಾಳೆ ಎರಡನೇ ಹಂತದ ವಿಧಾನಸಭಾ ಚುನಾವಣೆಗೆ ಮತದಾನ ನಡೆಯಲಿದೆ. ಈ ಹಂತದಲ್ಲಿ ಒಟ್ಟು ೧೨ ಜಿಲ್ಲೆಗಳ ೩೮ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದ್ದು, ಒಟ್ಟು ೨೩ ಲಕ್ಷ ಮತದಾರರು, ನಾಳೆ ೫೫ ಮಹಿಳಾ ಅಭ್ಯರ್ಥಿಗಳು ಸೇರಿದಂತೆ ೫೨೮ ಅಭ್ಯರ್ಥಿಗಳ ಭವಿಷ್ಯ ನಿರ್ಧರಿಸಲಿದ್ದಾರೆ. ವಿವಿಧ ಪಕ್ಷಗಳ ಅಭ್ಯರ್ಥಿಗಳು ಇಂದು ಮನೆ ಮನೆಗೆ ತೆರಳಿ ಮತಯಾಚಿಸಿದರು. ಮುಖ್ಯಮಂತ್ರಿ ಹೇಮಂತ್ ಸೊರೆನ್, ವಿಧಾನ ಸಭಾಧ್ಯಕ್ಷ ರಬೀಂದ್ರನಾಥ್ ಮಹ್ತೊ, ವಿರೋಧ ಪಕ್ಷದ

ನಾಯಕ ಅಮರನಾಥ ಕುಮಾರ್ ಬೌರಿ ಸೇರಿದಂತೆ ಹಲವು ಗಣ್ಯರು ಕಣದಲ್ಲಿದ್ದಾರೆ. ಮುಖ್ಯ ಚುನಾವಣಾಧಿಕಾರಿ ಕೆ.ರವಿಕುಮಾರ್ ಮಾತನಾಡಿ, ಮತದಾನದ ಮೇಲ್ವಿಚಾರಣೆಗಾಗಿ ವೆಬ್‌ಕ್ಯಾಸ್ಟಿಂಗ್ ಸೌಲಭ್ಯ ಬಳಸಿಕೊಳ್ಳಲಾಗಿದೆ. ಈಗಾಗಲೇ ಒಟ್ಟು ೧೪ ಸಾವಿರದ ೨೧೮ ಮತಗಟ್ಟೆಗಳನ್ನು ಸಿದ್ಧಪಡಿಸಲಾಗಿದ್ದು, ಈ ಪೈಕಿ ಸುಮಾರು ೭ ಸಾವಿರ ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿದೆ. ಚುನಾವಣಾ ಭದ್ರತೆಗಾಗಿ ಅರೆಸೇನಾ ಪಡೆಯ ೬೦೦ ತುಕಡಿಗಳನ್ನು ನಿಯೋಜಿಸಲಾಗಿದೆ. ಈ ಹಂತದ ಚುನಾವಣೆಯು ಎನ್‌ಡಿಎ ಮತ್ತು ಐಎನ್‌ಡಿಐಎ ಎರಡೂ ಮೈತ್ರಿಕೂಟಗಳಿಗೆ ಪ್ರತಿಷ್ಠೆಯ ಕಣವಾಗಿದೆ. ೨೦೧೯ ರ ವಿಧಾನಸಭಾ ಚುನಾವಣೆಯಲ್ಲಿ ಈ ೩೮ ಕ್ಷೇತ್ರಗಳ ಪೈಕಿ, ಜಾರ್ಖಂಡ್ ಮುಕ್ತಿ ಮೋರ್ಚಾ ೧೩, ಬಿಜೆಪಿ ೧೨, ಕಾಂಗ್ರೆಸ್ ೮ ಮತ್ತು ಸಿಪಿಐ-ಎಮ್‌ಎಲ್ ೧ ಕ್ಷೇತ್ರಗಳಲ್ಲಿ ಜಯಗಳಿಸಿದ್ದವು.

<><*<><>*><>

ಸುಸ್ಥಿರ ಚಲನಶೀಲತೆಗೆ ಸರ್ಕಾರದ ಬದ್ಧತೆಯು ಇಂಧನ ಭದ್ರತೆ, ಶುದ್ಧಗಾಳಿ ಮತ್ತು ಆಧುನೀಕರಿಸಿದ ಸಾರಿಗೆಯ ದೃಷ್ಟಿಕೋನವನ್ನು ಒಳಗೊಂಡಿದೆ ಎಂದು ಕೇಂದ್ರ ಭಾರೀ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಆಕ್ಸಲರೇಟಿಂಗ್ ಇ-ಮೊಬಿಲಿಟಿ ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಉದ್ದೇಶಿಸಿ ಸಚಿವರು ಈ ವಿಷಯ ತಿಳಿಸಿದರು. ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆ ಮತ್ತು ಹೊರಸೂಸುವಿಕೆಯನ್ನು ಕಡಿಮೆ ಮಾಡುವಲ್ಲಿ ಕೇಂದ್ರ ಸರ್ಕಾರ ಸಕ್ರಿಯವಾಗಿದೆ ಎಂದು ಅವರು ಹೇಳಿದರು. ೨೦೭೦ ಕ್ಕೆ ದೇಶದ ಮಹತ್ವಾಕಾಂಕ್ಷೆಯ ನಿವ್ವಳ ಶೂನ್ಯ ಗುರಿಗೆ ಕೊಡುಗೆ ನೀಡುವ ಮೂಲಕ ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಸರ್ಕಾರವು ದೇಶಾದಾದ್ಯಂತ ಅರಿವು ಮೂಡಿಸುತ್ತಿದೆ ಎಂದು ಸಚಿವರು ತಿಳಿಸಿದರು.

<><*<><>*><>

ಏಷ್ಯಾದ ಅತಿ ದೊಡ್ಡ ತಂತ್ರಜ್ಞಾನ ಶೃಂಗ - ಬೆಂಗಳೂರು ಟೆಕ್ ಸಮ್ಮಿಟ್‌ನ ೨೭ನೇ ಆವೃತ್ತಿಯನ್ನು ಬೆಂಗಳೂರಿನಲ್ಲಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿಯವರು, ಸಾಫ್ಟ್‌ವೇರ್, ಜೈವಿಕ ತಂತ್ರಜ್ಞಾನ ಮತ್ತು ಏರೋಸ್ಪೇಸ್‌ನಲ್ಲಿ ಬೆಂಗಳೂರು ಜಾಗತಿಕ ಮನ್ನಣೆ ಪಡೆದಿರುವುದನ್ನು ಒತ್ತಿ ಹೇಳಿದರು. ಇದೇ ಸಂದರ್ಭದಲ್ಲಿ ಬೆಂಗಳೂರು, ಮೈಸೂರು ಮತ್ತು ಬೆಳಗಾವಿಯಲ್ಲಿ ಮೂರು ಜಾಗತಿಕ ನಾವೀನ್ಯತಾ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಘೋಷಣೆ ಮಾಡಿದರು. ಜಾಗತಿಕ ಸೆಮಿ ಕಂಡಕ್ಟರ್ ಕೈಗಾರಿಕೆಗಳಿಗಾಗಿ ಮೈಸೂರಿನ ಬಳಿ ಎಲೆಕ್ಟ್ರಾನಿಕ್ಸ್ ಉತ್ಪಾದನಾ ಕ್ಲಸ್ಟರ್‌ಗಳನ್ನು ತೆರೆಯುವುದಾಗಿ ತಿಳಿಸಿದರು. ಇಂದಿನ ಉದ್ಘಾಟನಾ ಸಮಾರಂಭದಲ್ಲಿ ಮೈಕ್ರೋಸಾಫ್ಟ್ ಇಂಟೆಲ್, ಅಕ್ಸೆಂಚರ್ ಸೇರಿದಂತೆ ಹಲವು ತಂತ್ರಜ್ಞಾನ ಸಂಸ್ಥೆಗಳು ನಿಪುಣ ಕಾರ್ಯಕ್ರಮದಡಿಯಲ್ಲಿ ಸುಧಾರಿತ ಕೌಶಲ್ಯ ಹೊಂದಿರುವ ೧ ಯುವಕರಿಗೆ ತರಬೇತಿ ನೀಡಲು ರಾಜ್ಯ ಸರ್ಕಾರದೊಂದಿಗೆ ಜ್ಞಾಪನ ಪತ್ರಕ್ಕೆ ಸಹಿ ಹಾಕಿದವು. ಮೂರು ದಿನಗಳ ಕಾಲ ನಡೆಯಲಿರುವ ಈ ಶೃಂಗಸಭೆಯಲ್ಲಿ ೧೫ ದೇಶಗಳ ಸರ್ಕಾರಿ ಅಧಿಕಾರಿಗಳು, ತಜ್ಞರು, ಮತ್ತು ಉದ್ಯಮಿಗಳನ್ನು ಒಳಗೊಂಡಿರುವ ನಿಯೋಗಗಳು ಭಾಗವಹಿಸುತ್ತಿವೆ. ಕಾರ್ಯಕ್ರಮದ ನೇಪಥ್ಯದಲ್ಲಿ ಆಯೋಜಿಸಲಾದ ಅಂತಾರಾಷ್ಟ್ರೀಯ ಪ್ರದರ್ಶನ ಜೈವಿಕ, ಆರೋಗ್ಯ, ಬಾಹ್ಯಾಕಾಶ, ಹಸಿರು ಮತ್ತು ಕೃಷಿ ತಂತ್ರಜ್ಞಾನಗಳ ಮಹತ್ವವನ್ನು ನಿರೂಪಿಸುವ ವಿವಿಧ ಮೇಳಗಳನ್ನು ಒಳಗೊಂಡಿದೆ. ಈ ಪ್ರದರ್ಶನದಲ್ಲಿ ಹಲವು ಸಂಶೋಧನಾ ಸಂಸ್ಥೆಗಳು, ಪ್ರತಿಷ್ಠಿತ ಶಿಕ್ಷಣ ಕೇಂದ್ರಗಳು ಹಾಗೂ ನವೋದ್ಯಮಗಳು ಭಾಗವಹಿಸುತ್ತಿದೆ.

<><*<><>*><>

ನಾಳೆಯಿಂದ ಇದೇ ೨೮ರವರೆಗೆ ಗೋವಾದಲ್ಲಿ ೫೫ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯಲಿದೆ. ಈ ವರ್ಷದ ಚಿತ್ರೋತ್ಸವದಲ್ಲಿ ಆಸ್ಟ್ರೇಲಿಯಾವನ್ನು 'ಕಂಟ್ರಿ ಆಫ್ ಫೋಕಸ್' ಎಂದು ಗುರುತಿಸಲಾಗಿದ್ದು, ಆ ದೇಶದ ಚಲನಚಿತ್ರಗಳನ್ನು ವಿಶೇಷವಾಗಿ ಪ್ರದರ್ಶಿಸಲಾಗುತ್ತಿದೆ. ಇದೇ ಮೊದಲ ಬಾರಿಗೆ ಭಾರತೀಯ ಚಲನಚಿತ್ರದ ಅತ್ಯುತ್ತಮ ಚೊಚ್ಚಲ ನಿರ್ದೇಶಕ ಪ್ರಶಸ್ತಿ ನೀಡುತ್ತಿರುವುದು ಗಮನಾರ್ಹ. ಐಎಫ್ಎಫ್ಐನ ಇಂಡಿಯನ್ ಪನೋರಮಾ ವಿಭಾಗದಲ್ಲಿ ೨೫ ಚಲನಚಿತ್ರಗಳು ಮತ್ತು ೨೦ ನಾನ್-ಫೀಚರ್ ಚಲನಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ.

<><*<><>*><>

ಮುಕ್ತ ಮತ್ತು ಸುರಕ್ಷಿತ ಕಡಲ ಸಂಪರ್ಕಕ್ಕಾಗಿ ಭಾರತದ ದೂರದೃಷ್ಟಿ ಜಗತ್ತಿನಾದ್ಯಂತ ಉತ್ತಮ ಪ್ರತಿಕ್ರಿಯೆ ಪಡೆಯುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ 'ಸಾಗರ ಮಂಥನ್' ಸಂವಾದ ಕಾರ್ಯಕ್ರಮದಲ್ಲಿ ವರ್ಚುವಲ್ ಮೂಲಕ ಮಾತನಾಡಿದ ಅವರು, ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಬಂದರು, ಹಡಗು ಮತ್ತು ಜಲಮಾರ್ಗ ಸಚಿವಾಲಯವನ್ನು ಶ್ಲಾಘಿಸಿದರು. ಸಾಗರ್ ಮಂಥನ್‌ದ ಯಶಸ್ಸು ಮಾನವೀಯತೆಯ ಸಮೃದ್ಧಿಯ ಭವಿಷ್ಯದ ಪಾಲುದಾರಿಕೆಗಾಗಿ ಒಮ್ಮತವನ್ನು ನಿರ್ಮಿಸುತ್ತದೆ ಎಂದರು. ಇಂದು ಮುಕ್ತಾಯಗೊಳ್ಳಲಿರುವ ಸಂವಾದವು ಬೆಳವಣಿಗೆಯ ದೃಷ್ಟಿಕೋನವನ್ನು ವಿಸ್ತರಿಸಲು ವಿಚಾರ ವಿನಿಮಯ, ತಜ್ಞರ ಒಳನೋಟಗಳನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

<><*<><>*><>

ವಿಶ್ವ ಶೌಚಾಲಯ ದಿನವಾದ ಇಂದು ಕೇಂದ್ರ ಜಲಶಕ್ತಿ ಸಚಿವಾಲಯವು 'ನಮ್ಮ ಶೌಚಾಲಯ, ನಮ್ಮ ಸಮ್ಮಾನ' ಹೆಸರಿನ ಮೂರು ವಾರಗಳ ಅಭಿಯಾನ ಆರಂಭಿಸಿದೆ. ಈ ಅಭಿಯಾನವು ನೈರ್ಮಲ್ಯ ಮೂಲಸೌಕರ್ಯವನ್ನು ಸುಧಾರಿಸುವ ಗುರಿ ಹೊಂದಿದ್ದು, ಶುಚಿತ್ವದೆಡೆಗೆ ಬದಲಾವಣೆಯನ್ನು ಉತ್ತೇಜಿಸುವುದು ಮತ್ತು ದೇಶಾದ್ಯಂತ ಶೌಚಾಲಯಗಳ ನಿರ್ವಹಣೆ ಹೆಚ್ಚಿಸುವ ಮೂಲಕ ಸಮುದಾಯವನ್ನು ಬಲಪಡಿಸುತ್ತದೆ. ಅಭಿಯಾನದ ಪ್ರಚಾರದ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದ್ದು, ನಾಗರಿಕರು ತಮ್ಮ ನೈರ್ಮಲ್ಯದ ಯಶಸ್ಸಿನ ಕಥೆಗಳನ್ನು ಸಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಹಂಚಿಕೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ. ಡಿಸೆಂಬರ್ ೧೦ ರವರೆಗೆ ಈ ಅಭಿಯಾನ ನಡೆಯಲಿದೆ.

<><*<><>*><>

ಪಂಜಾಬ್ ಗಡಿಯಲ್ಲಿ ಭದ್ರತಾ ಪಡೆಯು ಪ್ರತಿಕೂಲ ಕ್ರಮಗಳನ್ನು ಯಶಸ್ವಿಯಾಗಿ ಎದುರಿಸುತ್ತಿದ್ದು, ಕಳೆದ ಎರಡು ದಿನಗಳಲ್ಲಿ ಪಂಜಾಬ್‌ನ ಅಮೃತಸರ, ತರ್ನ್ ತರಣ್, ಗುರುದಾಸ್‌ಪುರ ಮತ್ತು ಫಿರೋಜ್‌ಪುರ ಗಡಿ ಜಿಲ್ಲೆಗಳಲ್ಲಿ ೩ ಹೆರಾಯಿನ್ ದಾಸ್ತಾನುಗಳನ್ನು ಸಾಗಿಸುತ್ತಿದ್ದ ಒಂಭತ್ತು ಡ್ರೋನ್‌ಗಳನ್ನು ಭಾರತೀಯ ಭದ್ರತಾ ಪಡೆ ನೆಲಸಮಗೊಳಿಸಿದೆ. ಗಡಿಯಾಚೆ ನಡೆಯುತ್ತಿರುವ ಮಾದಕ ವಸ್ತುಗಳ ಕಳ್ಳ ಸಾಗಾಣಿಕೆಯನ್ನು ತಡೆಯಲು ಪಂಜಾಬ್ ಪೋಲಿಸರೊಂದಿಗೆ ಸಹಕರಿಸುವ ಮೂಲಕ ಗಡಿ ಭದ್ರತಾ ಪಡೆ ತನ್ನ ಕಾರ್ಯಾಚರಣೆಯನ್ನು ಮುಂದುವರೆಸಿದೆ.

**<><*<><>*><>**

ಸಂಸತ್ತಿನ ಚಳಿಗಾಲದ ಅಧಿವೇಶನಕ್ಕೂ ಮುನ್ನ ಕೇಂದ್ರ ಸರ್ಕಾರ, ಇದೇ ತಿಂಗಳ ೨೪ ರಂದು ಸರ್ವಪಕ್ಷ ಸಭೆಯನ್ನು ಕರೆದಿದೆ. ಸಭೆಯಲ್ಲಿ, ಲೋಕಸಭೆ ಮತ್ತು ರಾಜ್ಯಸಭೆ ಅಧಿವೇಶನ ಸುಗಮವಾಗಿ ಕಾರ್ಯನಿರ್ವಹಿಸಲು ಸರ್ಕಾರವು ಎಲ್ಲಾ ರಾಜಕೀಯ ಪಕ್ಷಗಳಿಂದ ಬೆಂಬಲವನ್ನು ಕೋರಲಿದೆ. ಚಳಿಗಾಲದ ಅಧಿವೇಶನ ಇದೇ ತಿಂಗಳ ೨೫ ರಿಂದ ಡಿಸೆಂಬರ್ ೨೦ ರವರೆಗೆ ನಡೆಯಲಿದೆ.

**<><*<><>*><>**

ಸುಸ್ಥಿರ ಮತ್ತು ಲಾಭದಾಯಕ ಕೃಷಿ, ಚೇತರಿಸಿಕೊಳ್ಳುವ ಪರಿಸರ ವ್ಯವಸ್ಥೆಗಳನ್ನು ಮತ್ತು ಎಲ್ಲರಿಗೂ ಆಹಾರ ಭದ್ರತೆಯನ್ನು ಖಾತ್ರಿಪಡಿಸುವ ಉಪಕ್ರಮಗಳನ್ನು ಬೆಂಬಲಿಸಲು ಸರ್ಕಾರ ಬದ್ಧವಾಗಿದೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ನವದೆಹಲಿಯಲ್ಲಿಂದು ಜಾಗತಿಕ ಮಣ್ಣಿನ ಸಮ್ಮೇಳನ ೨೦೨೪ ಅನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ಮಣ್ಣಿನ ಆರೋಗ್ಯ ಈಗ ಜಾಗತಿಕ ಕಾಳಜಿಯಾಗಿದೆ. ಸುಮಾರು ಶೇಕಡ ೩೦ ರಷ್ಟು ಮಣ್ಣು ಹಾಳಾಗಿದೆ ಮತ್ತು ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆಯಿಂದಾಗಿ ದೇಶದಲ್ಲಿ ಮಣ್ಣಿಗೆ ಹಾನಿಯಾಗಿದೆ ಎಂದು ಹೇಳಿದರು.

**<><*<><>*><>**

ಬಿಹಾರದ ರಾಜ್‌ಗೀರ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಮಹಿಳೆಯರ ಏಷ್ಯನ್ ಹಾಕಿ ಚಾಂಪಿಯನ್ಸ್ ಟ್ರೋಫಿ-೨೦೨೪ ರ ಸೆಮಿಫೈನಲ್‌ನಲ್ಲಿ ಭಾರತ ೨-೦ ಗೋಲುಗಳಿಂದ ಜಪಾನ್ ತಂಡವನ್ನು ಸೋಲಿಸಿ ಫೈನಲ್ ಪ್ರವೇಶಿಸಿದೆ. ಭಾರತ, ಗುಂಪು ಹಂತದ ಎಲ್ಲಾ ಪಂದ್ಯಗಳನ್ನು ಗೆದ್ದು, ಸೆಮಿಫೈನಲ್ ಪ್ರವೇಶಿಸಿತ್ತು. ಗುಂಪು ಹಂತದ ಅಂತಿಮ ಪಂದ್ಯದಲ್ಲಿ ಭಾರತ ಮತ್ತು ಜಪಾನ್ ಮುಖಾಮುಖಿಯಾಗಿದ್ದು, ಆ ಪಂದ್ಯದಲ್ಲಿ ಅತಿಥೇಯರು ೩-೦ ಅಂತರದಲ್ಲಿ ಜಯ ಸಾಧಿಸಿದ್ದರು. ಮತ್ತೊಂದು ಸೆಮಿಫೈನಲ್ ಹಣಾಹಣಿಯಲ್ಲಿ ಚೀನಾ, ಮಲೇಷ್ಯಾವನ್ನು ೩-೧ ಗೋಲುಗಳಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದೆ. ನಾಳೆ ಸಂಜೆ ೪.೪೫ಕ್ಕೆ ಭಾರತ ಮತ್ತು ಚೀನಾ ನಡುವೆ ಫೈನಲ್ ಪಂದ್ಯ ನಡೆಯಲಿದೆ. ಮತ್ತೊಂದೆಡೆ ಕಂಚಿನ ಪದಕಕ್ಕಾಗಿ ಮಲೇಷ್ಯಾ ಜಪಾನ್ ವಿರುದ್ಧ ಸೆಣಸಲಿದೆ.

**<><*<><>*><>**

ಚೀನಾದ ಶೆನ್‌ಜೆನ್‌ನಲ್ಲಿ ನಡೆಯುತ್ತಿರುವ ಚೀನಾ ಓಪನ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನಲ್ಲಿಂದು ನಡೆದ ಡಬಲ್ಸ್‌ನ ಪಂದ್ಯದಲ್ಲಿ ಭಾರತದ ಬಿ.ಸುಮೀತ್ ರೆಡ್ಡಿ ಮತ್ತು ಎನ್.ಸಿಕ್ಕಿ ರೆಡ್ಡಿ ಮಿಶ್ರ ಜೋಡಿ ೨-೧ ರ ಸುತ್ತಿನಲ್ಲಿ ಜಯ ಸಾಧಿಸಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**